ದಿನವಾಗಿದ್ದರೂ ಇನ್ನೂ ತಂಬಲಾಗಿದ್ದವು. ಮೂಸಿ ನೋಡಿದರೆ ಅದರಿಂದ ಮುಗ್ಗಲು ವಾಸನೆ, ತಕ್ಷಣವೇ ಮುಖ ಹಿಂದಕ್ಕೆಳೆದುಕೊಂಡ ಕೊನೇರಿಗೆ ತಾನೀಗ ಧರಿಸಿದ ಬಟ್ಟೆಯೇ ಪರವಾಗಿಲ್ಲವೆನಿಸಿತು.

ಕೊನೇರಿ ಈಗ ಏನೋ ಜ್ಞಾಪಿಸಿಕೊಂಡಂತೆ ಮೂಲೆಯಲ್ಲಿದ್ದ ರಾವ್ ಸಾಹೇಬ್‌ರ ಟೇಬಲ್‌ನೆಡೆಗೆ ನೋಡಿದ. ಚಹಾದ ಫ್ಲಾಸ್ಕ್ ಕಾಣಿಸಿತು. ಚಹಾ ಹಾಕಿಟ್ಟು ಎಷ್ಟೊತ್ತಾಯ್ತಲ್ಲ. ಬಿಸಿ ಆರಿರಬಹುದೇನೋ ಎಂದು ಅನುಮಾನಿಸುತ್ತಲೇ ಫ್ಲಾಸ್ಕ್‌ನ ಮುಚ್ಚಳ ತೆಗೆದರೆ ಅದಿನ್ನೂ ಹೊಗೆಯಾಡುತ್ತಿತ್ತು. ಒಳ್ಳೆಯದಾಯ್ತೆಂದು ಬಟ್ಟಲಿಗೆ ಹಾಕಿಕೊಂಡು ಗುಟುಕಿಸಿದ. ಚಹಾ ಗಂಟಲಿಗಿಳಿದೊಡನೆ ಚಳಿ ಕೊಂಚ ಕಡಿಮೆಯಾಯದಂತೆನಿಸಿತು. ಇನ್ನೇನೂ ಸಮಯ ಹನ್ನೆರಡಾಯ್ತು ಗೋವೆಗಿನ್ನು ಯಾವ ಗಾಡಿಗಳು ಬರುವುದಿಲ್ಲ. ಈಗಲಾದರೂ ಊಟ ಮಾಡಬೇಕೆಂದು ತಂದಿದ್ದ ಊಟದ ಪೊಟ್ಟಣ ಬಿಚ್ಚತೊಡಗಿದ. ಆ ಮಧ್ಯ ರಾತ್ರಿ ದಾರಿಹೋಕನೊಬ್ಬ ಬಂದೇ ಬಂದ ಕೊನೇರಿಯ ಊಟ ಕೆಡಿಸಲೆಂಬಂತೆ. 'ಯಾರಿದ್ದೀರಿ ಒಳಗಡೆ, ದಯವಿಟ್ಟು ಸ್ವಲ್ಪ ಹೊರಬನ್ನಿ' ಆಗಂತುಕನ ಧ್ವನಿ ಕತ್ತಲ ನೀರವತೆಯೊಳಗೆ ಗಟ್ಟಿಯಾಗಿ ಕೇಳಿಸಿತು.

ಆಗಾಗ ಬೈಕೋ, ಕಾರೋ, ಲಾರಿಯವರೋ ಹೀಗೆ ದಾರಿ ಕೇಳಿಕೊಂಡು ಇಲ್ಲಿಗೆ ಬಂದೇ ಬರುತ್ತಿದ್ದರು. ಆಗ ಕೊನೇರಿಗೆ ದಾರಿ ಕೇಳಿದ ವ್ಯಕ್ತಿ ತನ್ನ ಸೀಮೆಯವನಲ್ಲ ಎಂದು ಗೊತ್ತಾದರೂ ಪರಿಚಿತರೇ ಎಂಬಂತೆ ಅತ್ಯುತ್ಸಾಹದಿಂದಲೇ ಅದು ಇದು ಮಾತಾಡಿ ಅವರಿಗೆ ಬೇಕಾದ ಮಾಹಿತಿ ನೀಡುತ್ತಿದ್ದ. ತನ್ನದೇ ಬದುಕಿಗೆ ದಿಕ್ಕಿಲ್ಲ; ಕವಲು ದಾರಿಯಲ್ಲಿರುವ ತನ್ನನ್ನು ಯಾವ ದಾರಿ ಎಲ್ಲಿಗೆ ಕೊಂಡೊಯ್ಯುತ್ತದೆಯೆಂಬ ಸ್ಪಷ್ಟತೆಯಿಲ್ಲ. ಅಂತದರಲ್ಲಿ ದಿನರಾತ್ರಿ ಹತ್ತಾರು ದಾರಿಹೋಕರಿಗೆ ಮಾರ್ಗದರ್ಶಿಯಾಗುತ್ತಿದ್ದೇನಲ್ಲ ತಾನು ಎಂಬ ವಿಚಾರ ತಪ್ಪದೇ ಮನಸ್ಸಿನಲ್ಲಿ ಮೂಡಿ ಅವನ ಕುರಿತಾಗಿ ಅವನಿಗೇ ನಗುಬರುತ್ತಿತ್ತು. ಖಂಡಿತ ಜಾಣರು ಮಾಡುವ ಕೆಲಸವಲ್ಲವಿದು ಎಂದು ಅನ್ನಿಸಿ ಬದುಕಿನ ಬಗ್ಗೆ ಜಿಗುಪ್ಸೆಯಾಗುತ್ತಿತ್ತು. ಹೀಗಾದಾಗೆಲ್ಲ ಚಕ್ಕನೇ ನಿಂತಲ್ಲಿಂದ ನಾಲ್ಕು ಹೆಜ್ಜೆ ನಡೆದು ಜಾಗ ಬದಲಿಸಿ ಆ ವಿಚಾರವನ್ನು ಮರೆಯುವ ಪ್ರಯತ್ನ ಮಾಡುತ್ತಿದ್ದ. ಎಷ್ಟೋ ಸಾರಿ ಅಪರಿಚಿತ ಸವಾರರಿಗೆ ದಾರಿ ತೋರಿಸಿದ ಮೇಲೆ ಅವರು ಹಸನ್ಮುಖರಾಗಿ ಅಲ್ಲಿಂದ ತೆರಳುತ್ತಿದ್ದರೆ ಅವರು ಹೋದ ಎಷ್ಟೊತ್ತಿನವರೆಗೂ ಆ ನಗು ಇವನ ಮುಖದ ಮೇಲೆ ಪ್ರತಿಫಲಿಸುತ್ತಿತ್ತು.

ಎಂದಿನಂತೆ ಇಂದೂ ಕೂಡ ಆಗಂತುಕನೊಬ್ಬ ದಾರಿ ಕೇಳಲು ಶಿಬಿರದ ಹೊರಗಿನ ಗಗ್ಗರಿಗಟ್ಟೆಯ ಮೇಲೆ ಬಂದು ನಿಂತಿದ್ದ. ಪಕ್ಕದಲ್ಲಿಟ್ಟಿದ್ದ ಟಾರ್ಚ್ ಎತ್ತಿಕೊಂಡು ಅದರ ಗುಂಡಿ ಅದುಮುತ್ತ ಗಡಬಡಿಸುತ್ತ ಶಿಬಿರದ ಹೊಸ್ತಿಲು ದಾಟಿ ಹೊರಬಂದ ಕೊನೇರಿ. ಟಾರ್ಚ್ ಹಿಡಿದ ನೋಡಿದರೆ ಎದುರಿಗೆ ಅಜಾನುಬಾಹು ವ್ಯಕ್ತಿ ಹತ್ತಿರತ್ತಿರ ಐವತ್ತರ ಪ್ರಾಯದವ, ನೋಡಿದರೆ ಗೌರವ ಮೂಡಿಸುವಂತಹ ಮುಖಭಾವ ಅವನದು. ಜೋರಾಗಿ ನಡೆದುಬಂದಿದ್ದನೇನೋ ಅಂತಹ ತೇವ ರಾತ್ರಿಯಲ್ಲೂ ಹಣೆಯಿಂದ ಬೆವರಿಳಿಯುತ್ತಿತ್ತು. ಆಗಂತುಕ ಏಕೆ ಬಂದಿರಬಹುದೆಂದು ಅಭ್ಯಾಸಬಲದಿಂದೆಂಬಂತೆ ಊಹಿಸಿದ್ದರೂ ಕೊನೇರಿ 'ಏನುಹೇಳಿ' ಎಂಬಂತೆ ಅವನತ್ತ ನೋಟ ಬೀರಿದ.

ಆಗಂತುಕ ಒಂದು ಬಾರಿ ಮುಗುಳ್ನಕ್ಕು ಕೈ ಮಾಡುತ್ತ, 'ಈ ದಾರಿ ಎಲ್ಲಿಗೆ ಹೋಗುತ್ತದೆ' ಎಂದು ಕೇಳಿದ. 'ನೀವೆಲ್ಲಿಗೆ ಹೋಗಬೇಕು' ಮರುಪ್ರಶ್ನಿಸಿದ ಕೊನೇರಿ. 'ಅಲ್ಲಿ ದೂರದಲ್ಲಿ ಕಾಣುವ ಬೆಟ್ಟ ದಾಟಿದರೆ ಕಾಡಮಧ್ಯೆ ಮತ್ತೊಂದು ಬೆಟ್ಟವಿದೆ, ಅದೇ ಕರಡಿಬೆಟ್ಟ, ಅಲ್ಲಿಗೆ ಹೋಗಬೇಕು ನಾನು' ಆಗಂತುಕ ಉತ್ತರಿಸಿದ. ಕೊನೇರಿಗೆ ಏನೋ ಹೊಳೆದಂತಾಗಿ, ಕೇಳಲೇಬೇಡವೋ ಎಂಬಂತೆ 'ಅಲ್ಲಿಗೇಕೆ ಹೋಗುತ್ತಿದ್ದೀರಿ ನೀವು?' ಆಗಂತುಕನನ್ನು ವಿಚಿತ್ರವಾಗಿ ನೋಡುತ್ತ ಕೇಳಿದ. 'ಅಲ್ಲೊಬ್ಬ ಮಹಾನುಭಾವರಿದ್ದಾರಂತೆ ಅವರನ್ನು ಭೇಟಿಯಾಗಬೇಕು. ನನ್ನದೊಂದಿಷ್ಟು ಸಮಸ್ಯೆಗಳಿವೆ ಅವರ ಹತ್ತಿರ ಖಂಡಿತ ಪರಿಹಾರ ಸಿಗುತ್ತದಂತೆ' ಎಂದ ಆಗಂತುಕನ ಮುಖದಲ್ಲೀಗ ಅದುವರೆಗೂ ಕಾಣದ ಆತ್ಮವಿಶ್ವಾಸ ಕಾಣಿಸುತ್ತಿತ್ತು. 'ಈತ ನೋಡಲು ಸುಖಿಜೀವಿಯಂತೆ ಕಾಣುತ್ತಾನೆ, ಸಮಸ್ಯೆಯಾದರೂ ಏನಿದ್ದೀತು ಇವನಿಗೆ' ಒಂದು ಕ್ಷಣ ಅಂದುಕೊಂಡ ಕೊನೇರಿ ಮರುಕ್ಷಣ ಕೆಲವೊಬ್ಬರಿಗೆ ಕಷ್ಟಗಳು ಯಾವಾಗಲೂ ಇದ್ದೇ ಇರುತ್ತವೆ ನನಗಿದ್ದಂತೆ. ಗೆದ್ದಲು ಕಟ್ಟಿಗೆಯನ್ನು ಕೊರೆವಂತೆ ನೋವು ಸದ್ದಿಲ್ಲದೇ ಮನಸ್ಸನ್ನು ಕೊರೆದರೂ ದೇಹ ಮಾತ್ರ ಕೆಲವು